

# ನಾಣ್ಯ ನಗರ!

ಚೀನಾ ದೇಶದ ಹಿ ಪೈಕ್ವಿ ಎಂಬ ಕಲಾವಿದ ಕೇವಲ ನಾಣ್ಯಗಳನ್ನು ಬಳಸಿ, ತಾನು ವಾಸಿಸುತ್ತಿರುವ ನಗರದ ಪ್ರತಿಕೃತಿಯನ್ನು ನಿರ್ಮಿಸಿದ್ದಾನೆ. ಹನ್ನೊಂದು ಬೇರೆ ಬೇರೆ ದೇಶಗಳ ಹಳೆಯ ಹಾಗೂ ಹೊಸ ನಾಣ್ಯಗಳನ್ನು ಬಳಸಿ ಒಂದು ತಿಂಗಳಿಡೀ ಶ್ರಮಿಸಿ ಇದನ್ನು ರಚಿಸಿದ್ದಾನೆ.

ಇದರಲ್ಲಿ ರಸ್ತೆಗಳು, ಸೇತುವೆಗಳು, ದೊಡ್ಡ ದೊಡ್ಡ ಕಟ್ಟಡಗಳು, ಹೋಟೆಲ್‌ಗಳೆಲ್ಲವೂ ಇವೆ. ನೋಡಿದವರೆಲ್ಲಾ ವಾವ್! ಅದ್ಭುತ! ಎನ್ನುವ ಈ 'ನಾಣ್ಯ ನಗರ' ಮಾದರಿಯನ್ನು  ಮಾಡಲು ಈತ ಯಾವುದೇ ಅಂಟು ಬಳಸಿಲ್ಲ.

ಈತ ಕಾಯಿನ್ ಟ್ರೇಡಿಂಗ್ ಇಂಡಸ್ಟ್ರಿಯನ್ನು ಸಂಪರ್ಕಿಸಿ ತನಗೆ ಅಗತ್ಯವಿರುವಷ್ಟು ನಾಣ್ಯಗಳನ್ನು ಮೊದಲು ಸಂಗ್ರಹಿಸಿದನಂತೆ. ಕಾಯಿನ್ ಗಳು ಸಿಕ್ಕ ನಂತರ ಪ್ರತಿದಿನವೂ ಎರಡು ತಾಸು ತನ್ನ ಅಪಾರ್ಟ್‌ಮೆಂಟ್ ನ ನೆಲದ ಮೇಲೆ ಕಾಲೂರಿ ಕುಳಿತು, ಚೀನಾದ ನೈರುತ್ಯಕ್ಕಿರುವ ಚಾಂಗ್ ಕ್ವಿಂಗ್ ನಗರದ ಮಾಡೆಲ್ ಅನ್ನು ನಾಣ್ಯಗಳಿಂದ ನಿರ್ಮಿಸತೊಡಗಿದನಂತೆ. ಸುಮಾರು 30 ದಶಲಕ್ಷಗಳಷ್ಟು ಜನರಿರುವ ಚಾಂಗ್ ಕ್ವಿಂಗ್, ಚೀನಾದಲ್ಲೇ ಅತ್ಯಂತ ದೊಡ್ಡ ನಗರವಾಗಿದೆ.

'ಚೀನಾದಲ್ಲಿ ಮೊದಲು ಬಳಕೆಯಲ್ಲಿದ್ದ ಹಳೆಯ ನಾಣ್ಯಗಳು, ಈಗ ಚಲಾವಣೆಯಲ್ಲಿನ ನಾಣ್ಯಗಳು ಮತ್ತು ವಿದೇಶಿ ನಾಣ್ಯಗಳನ್ನು ಬಳಸಿ ಈ ಮಾಡೆಲ್ ಅನ್ನು ರಚಿಸಿದ್ದೇನೆ. ಇದರಲ್ಲಿ ಒಟ್ಟು 11 ಬೇರೆ ಬೇರೆ ದೇಶಗಳ ಒಟ್ಟು 50,000 ನಾಣ್ಯಗಳಿವೆ. ಪ್ರಮುಖ ಲ್ಯಾಂಡ್ ಮಾರ್ಕ್‌ಗಳಾದ ಈಸ್ಟ್ ವಾಟರ್, ಚೌಟಿಯನ್ ಗೇಟ್ ಮತ್ತು ನಾಬಿಂಗ್ ಪೆಟ್ರೊನಾಸ್ ಟವರ್, ಈ ಶರಟನ್ ಹೋಟೆಲ್ ಮುಂತಾದವುಗಳ ಬಗ್ಗೆಯೂ ಗಮಹರಿಸಿದ್ದೇನೆ' ಎನ್ನುವ ಹಿ ಪೈಕ್ವಿ, ಯಾರಾದರೂ ಮಾದರಿ ನಗರವನ್ನು ನೋಡಲು ಬಂದಾಗ 'ದಯವಿಟ್ಟು ಮುಟ್ಟ ಬೇಡಿ, ಇದರಲ್ಲಿ ಒಂದು ನಾಣ್ಯ ಬಿದ್ದರೂ ಇಡೀ ರಚನೆ ಕೆಟ್ಟುಹೊಗುತ್ತದೆ' ಎಂಬ ಎಚ್ಚರಿಕೆಯನ್ನು ನೀಡುತ್ತಾನಂತೆ.

■ **ವಿನಯ ಕುಮಾರ್ ಬಿ.ಹೆಚ್.**



